ಕರ್ನಾಟಕ ವಿಧಾನ ಪರಿಷತ್

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1310
2	ಸದಸ್ಯರ ಹೆಸರು	:	ಶ್ರೀ ಅಡಗೂರ್ ಹೆಚ್ ವಿಶ್ವನಾಥ್ (ನಾಮ ನಿರ್ದೇಶನ ಹೊಂದಿವರು)
3	ಉತ್ತರಿಸುವ ದಿನಾಂಕ	:	23.09.2021
4	ಉತ್ತರಿಸುವ ಸಚಿವರು	:	ಗೃಹ ಸಚಿವರು

ಪ್ರಶ್ನೆ	ಉತ್ತರ
(ಅ) ದಿನಾಂಕ: 1.04.2000 ರಿಂದ 31.03.2021ರವರೆಗೆ ಪೊಲೀಸ್ ಇಲಾಖೆಯ ವಿವಿಧ ಘಟಕಗಳಲ್ಲಿ ಕೋಟ್ಯಾಂತರ ರೂ.ಗಳು ಅಧಿಕಾರಿಗಳ ಮತ್ತು ಆಡಳಿತ ಸಿಬ್ಬಂದಿಯವರ ಅಧಿಕಾರ ದುರುಪಯೋಗ, ನಿಯಮಾವಳಿಗಳ ಉಲ್ಲಂಘನೆ ಮತ್ತು ನಿರ್ಲಕ್ಷತೆಯಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾದ ಆರ್ಥಿಕ ನಷ್ಟದ ಬಗ್ಗೆ ಇಲಾಖೆ ಮತ್ತು ಮಹಾ ಲೆಕ್ಕಪರಿಶೋಧಕರ ಲೆಕ್ಕ ಪರಿಶೋಧನೆಯಿಂದ ಎಷ್ಟು ಕೋಟಿ ದುರುಪಯೋಗವಾಗಿರುವುದು ಬೆಳಕಿಗೆ ಬಂದಿದೆ?	ಪೊಲೀಸ್ ಇಲಾಖೆಯ ವಿವಿಧ ಘಟಕಗಳಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ವಿವರ ಈ ಕೆಳಗಿನಂತಿದೆ.

ಘಟಕ	ಹಣ ದುರುಪಯೋಗ ಮೊತ್ತ
1.ಎಸ್.ಪಿ., ಕೊಡಗು ಜಿಲ್ಲೆ	8,40,000.00
2.ಎಸ್.ಪಿ., ತುಮಕೂರು ಜಿಲ್ಲೆ	20,13,205.00
3.ಎಸ್.ಪಿ., ತುಮಕೂರು ಜಿಲ್ಲೆ	4,68,412.00
4.ಕಮಾಂಡೆಂಟ್, 11ನೇ ಪಡೆ ಕೆ.ಎಸ್.ಆರ್.ಪಿ., ಹಾಸನ	4,06,39,946.00
5.ಡಿಸಿಪಿ, ಸಿಎಆರ್(ಕೇಂದ್ರ), ಬೆಂಗಳೂರು ನಗರ	66,000.00
6. ಎಸ್.ಪಿ., ಹಾವೇರಿ ಜಿಲ್ಲೆ	1,06,678.00
7. ಕಮಾಂಡೆಂಟ್, 1ನೇ ಪಡೆ ಕೆ.ಎಸ್.ಆರ್.ಪಿ., ಬೆಂಗಳೂರು	36,67,588.00
8. ಐಜಿಪಿ, ಈಶಾನ್ಯ ವಲಯ, ಕಲಬುರಗಿ	9,36,000.00
9. ಡಿಸಿಪಿ, ದಕ್ಷಿಣ ವಿಭಾಗ, ಬೆಂಗಳೂರು ನಗರ	60,000.00
10. ಡಿಸಿಪಿ, ದಕ್ಷಿಣ ವಿಭಾಗ, ಬೆಂಗಳೂರು ನಗರ	2,74,748.00
11. ಡಿಸಿಪಿ, ಸಂಚಾರ ಪೂರ್ವ ವಿಭಾಗ, ಬೆಂಗಳೂರು ನಗರ	21,000.00
12. ಡಿಸಿಪಿ, ಸಂಚಾರ ಪೂರ್ವ ವಿಭಾಗ, ಬೆಂಗಳೂರು ನಗರ	5,18,300.00
13. ಸಿ.ಎ.ಓ, ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು	1,77,594.00
ಒಟ್ಟು ಮೊತ್ತ ರೂ.	4,97,89,471.00

(ಆ) ಇತ್ತೀಚೆಗೆ ಎಸ್.ಪಿ., ಮಡಿಕೇರಿ, ಎಸ್.ಪಿ, ತುಮಕೂರು, ಕಮಾಂಡೆಂಟ್, 11ನೇ ಪಡೆ ಕೆ.ಎಸ್.ಆರ್.ಪಿ., ಹಾಸನ ಹಾಗೂ ಇತರೆ ಘಟಕಗಳಲ್ಲಿ ಕೋಟಿಗಟ್ಟಲೆ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಘಟಕಾಧಿಕಾರಿಗಳು ಮತ್ತು ಸಹಾಯಕ ಆಡಳಿತ ಅಧಿಕಾರಿಗಳು ಸೇರಿದಂತೆ ಆಡಳಿತ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಅಪರಾಧ ಮೊಕದ್ದಮೆಯನ್ನು ಹೂಡದಿರಲು ಕಾರಣವೇನು?	ಇತ್ತೀಚೆಗೆ ಹಣ ದುರುಪಯೋಗವಾದ ಪ್ರಕರಣಗಳು :- 1. ಪೊಲೀಸ್ ಅಧೀಕ್ಷಕರು, ಕೊಡಗು ಜಿಲ್ಲೆಯಲ್ಲಿ ನಗದು ಶಾಖೆಯಲ್ಲಿ ರೂ.8,40,000.00 ಗಳ ಮೊತ್ತದ ಹಣ ದುರುಪಯೋಗವಾಗಿರುತ್ತದೆ. ಹಣ ದುರುಪಯೋಗ ಪಡಿಸಿಕೊಂಡಿರುವ 03 ಜನ ಸಿಬ್ಬಂದಿಗಳ ವಿರುದ್ಧ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಮೊ.ಸಂ: 44/2021 ಕಲಂ 409, 417, 420 ರೆ/ವಿ 34 ಐಪಿಸಿ ಪ್ರಕರಣ ದಾಖಲಿಸಿಕೊಂಡು, ದಿನಾಂಕ: 10.07.2021ರಂದು ಪ್ರಥಮ ವರ್ತಮಾನ ವರದಿ(FIR) ದಾಖಲಾಗಿರುತ್ತದೆ. ಈ ಪ್ರಕರಣದಲ್ಲಿ ಆರೋಪಿತರನ್ನು ದಸ್ತಗಿರಿ ಮಾಡಿ, ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತಾರೆ. ಸದರಿ ಸಿಬ್ಬಂದಿಗಳನ್ನು ಅಮಾನತ್ತುಗೊಳಿಸಿದ್ದು, ಪ್ರಸ್ತುತ ಅಮಾನತ್ತಿನಲ್ಲಿರುತ್ತಾರೆ. 2. ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ ರವರ ಕಛೇರಿಯಲ್ಲಿ ಠಾಣೆಯಿಂದ ಮಂಜೂರಾತಿಗಾಗಿ ಬಂದ ಅಂದಾಜು ರೂ.1,69,17,602.00ಗಳ ಬಿಲ್ಲುಗಳಲ್ಲಿ ರೂ.1,57,75,532.00ಗಳಿಗೆ ಮಂಜೂರಾತಿಯನ್ನು ಪಡೆಯಲು ಮಂಡಿಸಿದ್ದು, ಆದರೆ ರೂ.1,77,18,462.00 ಗಳಿಗೆ ಒಟ್ಟು 194 ಬಿಲ್ಲುಗಳಲ್ಲಿ ಖಜಾನೆ-2ರಲ್ಲಿ ಬಿಲ್ಲುಗಳನ್ನು ಸಲ್ಲಿಸಿ, ಹೆಚ್ಚುವರಿ ಮೊತ್ತಗಳನ್ನು 18 ಸಿಬ್ಬಂದಿಗಳಿಗೆ ಜಮಾಗೊಳಿಸಿ ಹಾಗೂ ಇವರ ಬ್ಯಾಂಕ್ ಖಾತೆಗೆ ಮೊತ್ತಗಳು ಜಮಾಗೊಂಡಿರುವುದರ ಜೊತೆಗೆ ನೇರವಾಗಿ ನಗದನ್ನು ಸ್ವೀಕರಿಸಿ, ಅಂದಾಜು ರೂ.20,13,205.00ಗಳ ಮೊತ್ತವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಸಹಾಯಕ ಆಡಳಿತಾಧಿಕಾರಿ, ಶಾಖಾಧೀಕ್ಷಕರು ಹಾಗೂ ಪ್ರಥಮ ದರ್ಜೆ ಸಹಾಯಕರು ಇವರುಗಳ ವಿರುದ್ಧ ತುಮಕೂರು ನಗರದ ಹೊಸ ಬಡಾವಣೆ ಪೊಲೀಸ್ ಠಾಣೆಯಲ್ಲಿ ಮೊ.ಸಂ.62/2020 ಕಲಂ 408, 409, 420, 465, 470 ಐ.ಪಿ.ಸಿ. ರೀತ್ಯಾ ಪ್ರಕರಣ ದಾಖಲಾಗಿದ್ದು, ಪ್ರಕರಣದಲ್ಲಿನ ಆರೋಪಿಗಳಿಗೆ ನ್ಯಾಯಾಂಗ ಅಭಿಯೋಜನೆಗೆ ಒಳಪಡಿಸಲು ಸರ್ಕಾರ ಆದೇಶ ಸಂಖ್ಯೆ:ಒಇ 18 ಪೊಸಿಲಿ 2021ರ ದಿನಾಂಕ:07.10.2021ರಲ್ಲಿ ಅನುಮತಿ ನೀಡಿ ಆದೇಶಿಸಿರುತ್ತದೆ. ಮುಂದುವರೆದು, ಇದೇ ಆರೋಪಗಳ ಕುರಿತು ಜಂಟಿ ಇಲಾಖೆ ವಿಚಾರಣೆಯನ್ನು ಜರುಗಿಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11 ಮತ್ತು 13ರ ಪ್ರಕಾರ ಮತ್ತು ಕೆ.ಸಿ.ಎಸ್.ಆರ್. ನಿಯಮ 214ರನ್ವಯ ಸರ್ಕಾರವು ಸಂಬಂಧಿಸಿದ ಎ.ಎ.ಓ., ಶಾಖಾಧೀಕ್ಷಕರು ಮತ್ತು ವಿಷಯ ನಿರ್ವಾಹಕರುಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಕಾರಣ ಕೇಳುವ ನೋಟೀಸ್ (ಸಂಖ್ಯೆ: ಒಇ 22 ಪೊಸಿಲಿ 2020, ದಿನಾಂಕ:11.10.2021) ಅನ್ನು ಜಾರಿಗೊಳಿಸಲಾಗಿರುತ್ತದೆ.

	3. ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ ರವರ ಘಟಕದ 2018-20ನೇ ಸಾಲಿನಲ್ಲಿ ಮಹಾಲೇಖಪಾಲರ ಲೆಕ್ಕ ಪರಿಶೋಧನೆಯಿಂದ ರೂ.4,68,412.00ಗಳ ಮೊತ್ತವು ಖಜಾನೆಗೆ ಜಮೆ ಆಗಿರುವ ಬಗ್ಗೆ ವಿವರಗಳು ಮೇಲ್ನೋಟಕ್ಕೆ ಕಂಡುಬಾರದೇ ಇದ್ದುದರಿಂದ, ಸದರಿ ಅವಧಿಯಲ್ಲಿ ಕ್ಯಾಷ್ ಆರ್ಡರ್ಲಿಯಾಗಿ ಕರ್ತವ್ಯ ನಿರ್ವಹಿಸಿದ ಎಪಿಸಿ ರವರು ರೂ.4,68,412.00ಗಳನ್ನು ಸರ್ಕಾರದ ಖಜಾನೆಗೆ ಜಮಾ ಮಾಡದೇ, ತನ್ನ ಬಳಿಯೇ ಇಟ್ಟುಕೊಂಡಿರುವುದಾಗಿ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದು, ದಿನಾಂಕ:19.01.2021ರಂದು ಒಟ್ಟು ರೂ.4,68,412.00 ಗಳನ್ನು ಖಜಾನೆಗೆ ಜಮಾ ಮಾಡಿರುತ್ತಾರೆ. ಅದರಂತೆ ಸದರಿಯವರ ವಿರುದ್ಧ ಹೊಸ ಬಡಾವಣೆ ಪೊಲೀಸ್ ಠಾಣೆ, ತುಮಕೂರು ಇಲ್ಲಿ ಮೊ.ಸಂ.24/2021 ಕಲಂ 408, 409, 420, 465, 470 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿ ತನಿಖೆಯಲ್ಲಿರುತ್ತದೆ. ಅದರಂತೆ ಎ.ಎ.ಓ., ಶಾಖಾಧೀಕ್ಷಕರು ಮತ್ತು ವಿಷಯ ನಿರ್ವಾಹಕರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿರುತ್ತದೆ. 4. ಕಮಾಂಡೆಂಟ್, 11ನೇ ಪಡೆ ಕೆ.ಎಸ್.ಆರ್.ಪಿ. ಹಾಸನ ಘಟಕದಲ್ಲಿ ರೂ.4,06,39,946.00(ರೂಪಾಯಿ ನಾಲ್ಕು ಕೋಟಿ ಆರು ಲಕ್ಷ ಮೂವತ್ತೊಂಬತ್ತು ಸಾವಿರದ ಒಂಬೈನೂರ ನಲವತ್ತಾರು ಮಾತ್ರ)ಗಳ ಮೊತ್ತವು ದುರುಪಯೋಗವಾಗಿರುವ ಸಂಬಂಧ, ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಹಾಸನ ನಗರದ ಶಾಂತಿಗ್ರಾಮ ಪೊಲೀಸ್ ಠಾಣೆಯಲ್ಲಿ ಅಪರಾಧ ಪ್ರಕರಣ ಸಂಖ್ಯೆ:0075/2020, ದಿನಾಂಕ: 21.05.2020 ರನ್ವಯ ಪ್ರಕರಣ ದಾಖಲಾಗಿದ್ದು, ಪ್ರಕರಣವು ಸಿ.ಐ.ಡಿ., ಬೆಂಗಳೂರು ರವರ ಬಳಿ ತನಿಖೆಯಲ್ಲಿರುತ್ತದೆ ಹಾಗೂ ಸರ್ಕಾರದ ಆದೇಶದ ಸಂ:ಹೆಚ್‌ಡಿ 01 ಪೊಸಿಪ 2021, ದಿನಾಂಕ:21.04.2021ರನ್ವಯ ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿದ್ದು, ಇಲಾಖಾ ವಿಚಾರಣೆಯು ಪ್ರಗತಿಯಲ್ಲಿರುತ್ತದೆ. 5. ಡಿ.ಸಿ.ಪಿ., ಸಿ.ಎ.ಆರ್.(ಕೇಂದ್ರ), ಬೆಂಗಳೂರು ರವರ ಘಟಕದ 2016-20ನೇ ಸಾಲಿನಲ್ಲಿ ರೂ.66,000.00ಗಳು ದುರುಪಯೋಗವಾಗಿರುವುದು ಬೆಳಕಿಗೆ ಬಂದಿರುತ್ತದೆ. ದಿನಾಂಕ: 16.12.2020 ಮತ್ತು 17.12.2020ರಂದು ಸದರಿ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಲಾಗಿರುತ್ತದೆ. ಆದುದರಿಂದ ಈಗಾಗಲೇ ಸಂಬಂಧಪಟ್ಟ ಇಬ್ಬರು ವಿಷಯ ನಿರ್ವಾಹಕರನ್ನು ಕಚೇರಿಯ ಆದೇಶ ಸಂಖ್ಯೆ: ಡಿಇ/12/2020, ದಿನಾಂಕ:20.06.2021ರಂದು ಅಮಾನತ್ತು ಗೊಳಿಸಲಾಗಿರುತ್ತದೆ. ವಿಷಯ ನಿರ್ವಾಹಕರು ಮತ್ತು ಎ.ಎ.ಓ.ರವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸುವ ಪೂರ್ವದಲ್ಲಿ ದೋಷಾರೋಪಣಾ ಪತ್ರವನ್ನು ಹೊರಡಿಸಲಾಗಿರುತ್ತದೆ.

(ಇ) ಸಾರ್ವಜನಿಕ ಹಣ, ಆಸ್ತಿಗಳಿಗೆ ರಕ್ಷಣೆ ನೀಡಬೇಕಾದ ಶಿಸ್ತಿನ ಪೊಲೀಸ್ ಇಲಾಖೆಯಲ್ಲೇ ಕೋಟಿಕಟ್ಟಲೆ ಸರ್ಕಾರದ ಹಣವನ್ನು ಪೊಲೀಸ್ ಅಧಿಕಾರಿಗಳೇ ದುರುಪಯೋಗ/ಕಳ್ಳತನ ಕೃತ್ಯ ನಡೆದಿದ್ದರೂ ನಡೆದ ಬಗ್ಗೆ ಸಂಬಂಧಪಟ್ಟ ಘಟಕಾಧಿಕಾರಿಗಳ ಮತ್ತು ಡಿ.ಡಿ.ಓ.ರವರುಗಳ ವಿರುದ್ಧ ಅಪರಾಧ ಮೊಕದ್ದಮೆ ಹೂಡದಿರಲು ಕಾರಣವೇನು?	**1. ಕೊಡಗು ಜಿಲ್ಲೆ** – ನಗದು ಶಾಖೆಯಲ್ಲಿ ರೂ.8,40,000.00ಗಳ ಮೊತ್ತದ ಹಣ ದುರುಪಯೋಗವಾಗಿರುತ್ತದೆ. ಹಣ ದುರುಪಯೋಗ ಪಡಿಸಿಕೊಂಡಿರುವ 03 ಜನ ಸಿಬ್ಬಂದಿಗಳ ವಿರುದ್ಧ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಮೊ.ಸಂ: 44/2021 ಕಲಂ 409, 417, 420 ರೆ/ವಿ 34 ಐಪಿಸಿ ಪ್ರಕರಣ ದಾಖಲಿಸಿಕೊಂಡು, ದಿನಾಂಕ: 10.07.2021ರಂದು F.I.R. ದಾಖಲಾಗಿರುತ್ತದೆ. ಈ ಪ್ರಕರಣದಲ್ಲಿ ಆರೋಪಿತರನ್ನು ದಸ್ತಗಿರಿ ಮಾಡಿ, ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತಾರೆ. ಸದರಿ ಸಿಬ್ಬಂದಿಗಳನ್ನು ಅಮಾನತ್ತುಗೊಳಿಸಿದ್ದು, ಪ್ರಸ್ತುತ ಅಮಾನತ್ತಿನಲ್ಲಿರುತ್ತಾರೆ. ಈ ಪ್ರಕರಣದಲ್ಲಿ ಎ.ಎ.ಓ.ರವರ ಕರ್ತವ್ಯ ನಿರ್ಲಕ್ಷತೆ ಬಗ್ಗೆ ಡಿವೈ.ಎಸ್.ಪಿ. ದರ್ಜೆ ಅಧಿಕಾರಿಗಳಿಂದ ಪೂರ್ವಭಾವಿ ವಿಚಾರಣೆಗೆ ನಡೆಯುತ್ತಿದ್ದು, ವರದಿ ನಿರೀಕ್ಷಣೆಯಲ್ಲಿದೆ. **2. ತುಮಕೂರು ಜಿಲ್ಲೆ** – ಅಂದಾಜು ರೂ.20,13,205.00ಗಳ ಮೊತ್ತವನ್ನು ದುರುಪಯೋಗ ಪಡಿಸಿಕೊಂಡಿರುವ ಸಹಾಯಕ ಆಡಳಿತಾಧಿಕಾರಿ, ಶಾಖಾಧೀಕ್ಷಕರು ಹಾಗೂ ಪ್ರಥಮ ದರ್ಜೆ ಸಹಾಯಕರು ಇವರುಗಳ ವಿರುದ್ಧ ತುಮಕೂರು ನಗರದ ಹೊಸ ಬಡಾವಣೆ ಪೊಲೀಸ್ ಠಾಣೆಯಲ್ಲಿ ಮೊ.ಸಂ.62/2020 ಕಲಂ 408, 409, 420, 465, 470 ಐ.ಪಿ.ಸಿ. ರೀತ್ಯಾ ಪ್ರಕರಣ ದಾಖಲಾಗಿದ್ದು, ಪ್ರಕರಣದಲ್ಲಿನ ಆರೋಪಿಗಳಿಗೆ ನ್ಯಾಯಾಂಗ ಅಭಿಯೋಜನೆಗೆ ಒಳಪಡಿಸಲು ಸರ್ಕಾರ ಆದೇಶ ಸಂಖ್ಯೆ:ಒಇ 18 ಪೊಸಿಲಿ 2021ರ ದಿನಾಂಕ:07.10.2021ರಲ್ಲಿ ಅನುಮತಿ ನೀಡಿ ಆದೇಶಿಸಿರುತ್ತದೆ. **3. ತುಮಕೂರು ಜಿಲ್ಲೆ** – ರೂ.4,68,412.00ಗಳ ಮೊತ್ತವನ್ನು ದುರುಪಯೋಗಪಡಿಸಿಕೊಂಡ ಎ.ಪಿ.ಸಿ.ರವರ ವಿರುದ್ಧ ಹೊಸ ಬಡಾವಣೆ ಪೊಲೀಸ್ ಠಾಣೆ, ತುಮಕೂರು ಇಲ್ಲಿ ಮೊ.ಸಂ.24/2021 ಕಲಂ 408, 409, 420, 465, 470 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿ ತನಿಖೆಯಲ್ಲಿರುತ್ತದೆ. **4. ಕಮಾಂಡೆಂಟ್, 11ನೇ ಪಡೆ ಕೆ.ಎಸ್.ಆರ್.ಪಿ. ಹಾಸನ** – ರೂ.4,06,39,946/-ಗಳ ಹಣ ದುರುಪಯೋಗ ಕುರಿತಂತೆ ಘಟಕದಲ್ಲಿನ ಘಟಕಾಧಿಕಾರಿ ಮತ್ತು ಡಿ.ಡಿ.ಓ.ರವರುಗಳ ವಿರುದ್ಧ ಹಾಸನ ನಗರದ ಶಾಂತಿ ಗ್ರಾಮ ಪೊಲೀಸ್ ಠಾಣೆ ಅಪರಾಧ ಸಂ: 0075/2020, ದಿನಾಂಕ: 21.05.2020ರನ್ವಯ ಮೊಕದ್ದಮೆ ದಾಖಲಿಸಲಾಗಿರುತ್ತದೆ. ಮತ್ತು ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 26 ಪೊಸಿಪ 2021, ದಿನಾಂಕ:19.11.2021 ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿತರುಗಳ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸುವ ಸಲುವಾಗಿ ಅಭಿಯೋಜನ

	ಮಂಜೂರಾಗಿ ನೀಡಲಾಗಿರುತ್ತದೆ ಹಾಗೂ ಪ್ರಕರಣವನ್ನು ಸಿ.ಐ.ಡಿ. ತನಿಖೆಗೆ ಒಪ್ಪಿಸಲಾಗಿರುತ್ತದೆ. **5. ಸಿ.ಎ.ಆರ್(ಕೇಂದ್ರ) ಬೆಂಗಳೂರು ನಗರ** – ರೂ.66,000/-ಗಳ ಹಣ ದುರುಪಯೋಗಕ್ಕೆ ಕಾರಣರಾದವರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆಸಲಾಗುತ್ತಿದ್ದು, ಇಲಾಖಾ ವಿಚಾರಣೆಯಲ್ಲಿ ಕಂಡುಬರುವ ಅಂಶಗಳನ್ನು ಆಧರಿಸಿ ಮೊಕದ್ದಮ್ಮೆ ದಾಖಲಿಸುವ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. ಸದರಿ ಪ್ರಕರಣಗಳಲ್ಲಿ ಸಿಬ್ಬಂದಿರವರುಗಳು ದುರುಪಯೋಗಕ್ಕೆ ಕಾರಣರಾಗಿದ್ದು, ಇದರಲ್ಲಿ ಘಟಕಾಧಿಕಾರಿ ಮತ್ತು ಡಿ.ಡಿ.ಓ. ರವರುಗಳ ಪಾತ್ರವಿಲ್ಲದಿರುವುದರಿಂದ ಇವರುಗಳ ವಿರುದ್ಧ ಮೊಕದ್ದಮೆ ಹೂಡಿರುವುದಿಲ್ಲ. **6. ಹಾವೇರಿ ಜಿಲ್ಲೆ** – ರೂ.1,06,678.00ಗಳ ಹಣ ದುರುಪಯೋಗ ಕುರಿತಂತೆ ಎ.ಎ.ಓ., ಶಾಖಾಧೀಕ್ಷಕರು ಮತ್ತು ವಿಷಯನಿರ್ವಾಹಕರ ವಿರುದ್ಧ ಹಾವೇರಿ ಗ್ರಾಮೀಣ ಪಿ.ಎಸ್. ಅಪರಾಧ ಸಂಖ್ಯೆ:05/2011 ಕಲಂ 406,408,409,420 ಐಪಿಸಿರಡಿಯಲ್ಲಿ ಪ್ರಕರಣ ದಾಖಲಾಗಿ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ. ಮುಂದಿನ ವಿಚಾರಣೆ ದಿನಾಂಕ:11-10-2021ರಂದು ಇರುತ್ತದೆ. ಅಲ್ಲದೆ ಈ ಸಂಬಂಧವಾಗಿ ಮೇಲೆ ನಮೂದಿಸಿರುವಂತೆ ಇಲಾಖಾ ವಿಚಾರಣೆ ಸಹಾ ನಡೆಸಲಾಗಿರುತ್ತದೆ. **7. ಕಮಾಂಡೆಂಟ್, 1ನೇ ಕೆ.ಎಸ್.ಆರ್.ಪಿ., ಬೆಂಗಳೂರು** – ರೂ.36,67,588.00ಗಳ ಹಣ ದುರುಪಯೋಗದ ಕುರಿತಂತೆ ಹಲಸೂರು ಪೊಲೀಸ್ ಠಾಣೆಯಲ್ಲಿ ಮೊ.ಸಂ.411/2014, ದಿ:03.11.2014ರಂದು ದಾಖಲಾಗಿರುತ್ತದೆ. 4ನೇ ಅಡಿಷನಲ್ ಸಿ.ಎಂ.ಎಂ.ಕೋರ್ಟ್, ಬೆಂಗಳೂರು ಇಲ್ಲಿ ಸಿ.ಸಿ. ಸಂ: 27056/15ರಲ್ಲಿ ವಿಚಾರಣೆ ನಡೆಯುತ್ತಿದ್ದು, ಮುಂದಿನ ವಿಚಾರಣೆ ದಿ:18.10.2021ರಂದು ನಿಗದಿಯಾಗಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ:ಒಇ 39 ಪೊಸಿಲಿ 2015, ದಿನಾಂಕ:27.10.2021ರಲ್ಲಿ ಪ್ರಕರಣದಲ್ಲಿನ ವಿಚಾರಣಾ ವರದಿಯ ಅನುಬಂಧ 1 ರಿಂದ 10 ರಲ್ಲಿನ ದಾಖಲೆಗಳನ್ನು ಪರಿಶೀಲಿಸಿ ಎಷ್ಟು ಮೊತ್ತದ ಚೆಕ್‌ಗಳನ್ನು ನವೀಕರಿಸಿ ಜಮಾ ಮಾಡಲಾಗಿದೆ ಮತ್ತು ನವೀಕರಿಸಲಾಗದ ವ್ಯಪಗತವಾಗಿರುವ ಚೆಕ್‌ಗಳ ಸಂಬಂಧ ಯಾರ ಅವಧಿಯಲ್ಲಿ ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ಖಚಿತವಾಗಿ ನಷ್ಟದ ಮೊತ್ತವನ್ನು ಪ್ರತಿ ಆರೋಪಿತರ ಸಂಬಂಧ ಗುರುತಿಸಿ ವರದಿಯನ್ನು ಕಳುಹಿಸಿಕೊಡಲು ಕೋರಿದ್ದು ಪ್ರಕರಣವು ಚಾಲ್ತಿಯಲ್ಲಿರುತ್ತದೆ. **8. ಈಶಾನ್ಯ ವಲಯ, ಕಲಬುರಗಿ** – ಜಿ.ಪಿ.ಎಫ್ ಮುಂಗಡ ಮಂಜೂರಾತಿಯ 29 ಪ್ರಕರಣಗಳಲ್ಲಿ ಆಡಳಿತ ಸಿಬ್ಬಂದಿಯವರ

	ಅಧಿಕಾರ ದುರುಪಯೋಗದಿಂದ ರೂ.9,36,000/-ಗಳನ್ನು ಅಕ್ರಮವಾಗಿ ಖಜಾನೆಯಿಂದ ಸೆಳೆದಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಡಿ.ಡಿ.ಓ ಹಾಗೂ ಸಿಬ್ಬಂದಿಗಳ ವಿರುದ್ಧ ಕಲಬುರಗಿ ನಗರ ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ಮೊ.ನಂ. 289/2000 ಕಲಂ 120(ಬಿ, 465, 468, 471 (477(ಎ), 408, 409, 420 ಸಂಗಡ 34 ಐ.ಪಿ.ಸಿ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿರುತ್ತದೆ. ಜೆ.ಎಮ್.ಎಫ್.ಸಿ., ಕೋರ್ಟ್, ಕಲಬುರಗಿಯ ಸಿ.ಸಿ. ನಂ:2912/2017 ರಲ್ಲಿ ವಿಚಾರಣೆ ನಡೆದು, ದಿನಾಂಕ:19/12/2019 ರಂದು ಘನ ನ್ಯಾಯಾಲಯವು ಆರೋಪಿತರಿಗೆ (ಎ-1 ಮತ್ತು ಎ-2) 3 ವರ್ಷ ಕಠಿಣ ಕಾರಾಗೃಹ ವಾಸ ಶಿಕ್ಷೆ, ಜೊತೆಗೆ ಪ್ರತಿಯೊಬ್ಬರಿಗೆ ರೂ.36,000.00 ದಂಡ ಹಾಗೂ ಆರೋಪಿತರು ದಂಡ ಪಾವತಿಸದೆ ಇದ್ದ ಪಕ್ಷದಲ್ಲಿ 6 ತಿಂಗಳು ಸಾದಾ ಕಾರಾಗೃಹ ವಾಸ ಶಿಕ್ಷೆ ವಿಧಿಸಲಾಗಿರುತ್ತದೆ. ಮಾನ್ಯ ಜೆ.ಎಮ್.ಎಫ್.ಸಿ ಕಲಬುರಗಿ ನ್ಯಾಯಾಲಯವು ನೀಡಿರುವ ಶಿಕ್ಷೆಯ ಆದೇಶದ ವಿರುದ್ಧ ಆರೋಪಿತರು ಕಲಬುರಗಿ ಘನ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯಕ್ಕೆ ಮೇಲ್ಮನವಿ (ಅಪೀಲು) ಸಲ್ಲಿಸಿರುತ್ತಾರೆ. ಈ ಬಗ್ಗೆ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಕಲಬುರಗಿ ರವರು ತಡೆಯಾಜ್ಞೆ ನೀಡಿ, CRL.A – CRIMINAL APPEAL NO. 01/2020ರಲ್ಲಿ ವಿಚಾರಣೆ ನಡೆದಿರುತ್ತದೆ. **9. ದಕ್ಷಿಣ ವಿಭಾಗ, ಬೆಂಗಳೂರು ನಗರ** – ರೂ.60,000/- + 2,74,748/-ಗಳ ದುರುಪಯೋಗಕ್ಕೆ ಕಾರಣವಾದ ಸಂಬಂಧಪಟ್ಟ ಸಿಬ್ಬಂದಿಯ ವಿರುದ್ಧ ಜಯನಗರ ಪೊಲೀಸ್ ಠಾಣೆಯಲ್ಲಿ ಕಲಂ 409, 420 ಐಪಿಸಿ ಪ್ರಕಾರ ಮೊಕದ್ದಮೆ ಸಂಖ್ಯೆ: 384/2002 ದಾಖಲಾಗಿದೆ. ಆರೋಪಿ ಶ್ರೀಮತಿ. ಕ್ಷಮಾದೇವಿರವರು ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಯಲ್ಲಿರುವಾಗ ದಿನಾಂಕ: 20.03.2017ರಲ್ಲಿ ಅನಾರೋಗ್ಯದಿಂದ ಮೃತಪಟ್ಟಿರುವುದರಿಂದ ಘನ ನ್ಯಾಯಾಲಯವು ದಿನಾಂಕ: 21.04.2017ರಂದು ಅಬೇಟೆಡ್ ಪ್ರಕರಣವೆಂದು ಅಂತಿಮ ತೀರ್ಪು ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಿದೆ. **10. ಸಂಚಾರ ಪೂರ್ವ ವಿಭಾಗ, ಬೆಂಗಳೂರು ನಗರ** – ಶ್ರೀ. ಜಯಣ್ಣ, ಪಿ.ಎಸ್.ಐ ರವರು ನಿವೃತ್ತರಾಗಿದ್ದರಿಂದ ರೂ.21,000/-ಗಳ ದುರುಪಯೋಗ ಹಣವನ್ನು ಪಿಂಚಣಿಯಿಂದ ವಸೂಲಿ ಮಾಡಲು ಮಹಾಲೇಖಪಾಲರ ಕಛೇರಿ ದಿನಾಂಕ: 28.05.2020ರಂದು ಪತ್ರ ಬರೆಯಲಾಗಿದೆ.

	11. ಸಂಚಾರ ಪೂರ್ವ ವಿಭಾಗ, ಬೆಂಗಳೂರು ನಗರ – ರೂ.5,18,300/-ಗಳ ದುರುಪಯೋಗ ಕುರಿತಂತೆ ಟೋಯಿಂಗ್ ವಾಹನದ ದಂಡ ಮೊತ್ತವನ್ನು ಬ್ಯಾಂಕಿಗೆ ಕಟ್ಟದಿರುವ ಪ್ರಕರಣದಲ್ಲಿ ದುರುಪಯೋಗಕ್ಕೆ ಕಾರಣರಾದವರ ವಿರುದ್ಧ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಕಲಂ 408, 420 ಐಪಿಸಿ ಪ್ರಕಾರ ಮೊಕ್ಕದಮೆ ಸಂಖ್ಯೆ:203/2004 ದಾಖಲಾಗಿದೆ. ಪ್ರಕರಣವು ಸಿ.ಓ.ಡಿ. ತನಿಖೆಯಲ್ಲಿರುತ್ತದೆ. **12. ಪ್ರಧಾನ ಕಛೇರಿ** – ವಿವಿಧ ಸಂಸ್ಥೆಗಳಿಗೆ ಮಂಜೂರಾದ ಒಟ್ಟು ಮೊತ್ತ ರೂ.1,77,594/-ಗಳನ್ನು ಮೆ॥ ಕಂಪೋಗ್ರಾಫಿಕ್ಸ್ ಸಂಸ್ಥೆಯ ಬದಲಾಗಿ ಶ್ರೀ. ರಿಷಿ ಆರ್ ಎಂಬ ವೈಯಕ್ತಿಕ ಖಾತೆಯನ್ನು ಸೃಷ್ಟಿಸಿ ಜಮಾ ಮಾಡಿರುವುದು ಕಂಡುಬಂದಿರುತ್ತದೆ. ಆದರೆ ಸದರಿ ದುರುಪಯೋಗ ಪಡಿಸಿದ ಮೊತ್ತದಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗದೆ ಸಂಬಂಧಿಸಿದ ಸಂಸ್ಥೆಗೆ ನಷ್ಟವಾಗಿದ್ದು ಅದನ್ನು ಆರೋಪಿದ ಸರ್ಕಾರಿ ನೌಕರರಿಂದ ವಸೂಲಿ ಮಾಡಿ ಸಂಬಂಧಪಟ್ಟ ಸಂಸ್ಥೆಗೆ ಪಾವತಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ಪ್ರ.ದ.ಸ. ರವರ ವಿರುದ್ಧ ಇಲಾಖಾ ವಿಚಾರಣೆ ನಡೆಸಿ ಸದರಿಯವರನ್ನು ಸೇವೆಯಿಂದ ವಜಾಗೊಳಿಸಲಾಗಿರುತ್ತದೆ.
(ಈ) ಪೊಲೀಸ್ ತನಿಖೆ ಮುಗಿಯುವವರೆವಿಗೂ ಘಟಕಾಧಿಕಾರಿ ಮತ್ತು ಡಿ.ಡಿ.ಓ.ರವರುಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿ ಅಥವಾ ವರ್ಗಾವಣೆ ಮಾಡದಿರಲು ಕಾರಣವೇನು? ಸದರಿ ಅಧಿಕಾರಿಗಳು ಸಂಬಂಧಪಟ್ಟ ದಾಖಲೆಗಳನ್ನು ತಿದ್ದುವ, ನಾಶಪಡಿಸುವುದಿಲ್ಲವೆ ಮತ್ತು ಅಧಿಕಾರ ದುರುಪಯೋಗ ಪ್ರಭಾವ ಬೀರುವ ಸಂಬಂಧವಿರುವುದಿಲ್ಲವೇ;	**1. ಕೊಡಗು ಜಿಲ್ಲೆ** – ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಿ, ಎಫ್.ಐ.ಆರ್. ದಾಖಲಾಗಿರುತ್ತದೆ. ಈ ಪ್ರಕರಣದಲ್ಲಿ ಆರೋಪಿತರನ್ನು ದಸ್ತಗಿರಿ ಮಾಡಿ, ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತಾರೆ. ಸದರಿ ಸಿಬ್ಬಂದಿಗಳನ್ನು ಅಮಾನತ್ತುಪಡಿಸಿ ಸೇವೆಯಿಂದ ಹೊರಗಿಡಲಾಗಿರುತ್ತದೆ. ಈ ಪ್ರಕರಣದಲ್ಲಿ ಡಿಡಿಓ/ಎ.ಎ.ಓ. ರವರ ಕರ್ತವ್ಯ ನಿರ್ಲಕ್ಷತೆ ಬಗ್ಗೆ ಡಿವೈ.ಎಸ್.ಪಿ. ದರ್ಜೆ ಅಧಿಕಾರಿಗಳಿಂದ ಪೂರ್ವಭಾವಿ ವಿಚಾರಣೆಗೆ ನಡೆಯುತ್ತಿದ್ದು, ವರದಿ ಅಂಶಗಳನ್ನು ಪರಿಶೀಲಿಸಿ ಸಂಬಂಧಪಟ್ಟವರ ಮೇಲೆ ವರ್ಗಾವಣೆ ಮಾಡುವ ಬಗ್ಗೆ / ಅಮಾನತ್ತು ಮಾಡುವ ಬಗ್ಗೆ ವಲಯಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ನಿಯಮಾಸಾರ ಕ್ರಮ ಕೈಗೊಳ್ಳಲಾಗುವುದು ಹಾಗೂ ಈಗಾಗಲೇ ವಲಯಾಧಿಕಾರಿಗಳು ಸದರಿ ಘಟಕಾಧಿಕಾರಿಗಳಿಗೆ ದಾಖಲೆಗಳನ್ನು ಸಂರಕ್ಷಿಸಲು ಸೂಕ್ತ ಸೂಚನೆಗಳನ್ನು ನೀಡಿರುತ್ತಾರೆ. **2. ತುಮಕೂರು ಜಿಲ್ಲೆ** – ಶ್ರೀ ಎಂ.ಕೃಷ್ಣಪ್ಪ, ಎ.ಎ.ಓ. ರವರು ದಿನಾಂಕ: 31.12.2020ರಂದು ವಯೋನಿವೃತ್ತಿ ಹೊಂದಿರುತ್ತಾರೆ. ಶಾಖಾಧೀಕ್ಷಕರನ್ನು ಅಮಾನತ್ತಿನಲ್ಲಿಡಲಾಗಿರುತ್ತದೆ. ನಂತರ ಸದರಿಯವರ ಅಮಾನತ್ತಿನ ಲೀನ್‌ನ್ನು ಎಪಿಟಿಎಸ್, ಯಲಹಂಕ, ಬೆಂಗಳೂರು ಇಲ್ಲಿಗೆ ಹಾಗೂ ಪ್ರಥಮ ದರ್ಜೆ ಸಹಾಯಕರನ್ನು ಮಾನತ್ತುಗೊಳಿಸಿ, ಸದರಿಯವರ ಅಮಾನತ್ತಿನ ಲೀನ್‌ನ್ನು ಪೊಲೀಸ್ ಆಯುಕ್ತರ ಕಛೇರಿ, ಮಂಗಳೂರು ನಗರ ಇಲ್ಲಿಗೆ ಸ್ಥಳಾಂತರಿಸಿ ಆದೇಶಿಸಲಾಗಿರುತ್ತದೆ.

	3. ತುಮಕೂರು ಜಿಲ್ಲೆ – ಹಣ ದುರುಪಯೋಗದ ಬಗ್ಗೆ ಹೊಸ ಬಡಾವಣೆ ಪೊಲೀಸ್ ಠಾಣೆ, ತುಮಕೂರು ಇಲ್ಲಿ ಮೊ.ಸಂ.24/2021 ಕಲಂ 408, 409, 420, 465, 470 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿ ತನಿಖೆಯಲ್ಲಿರುತ್ತದೆ. ಎ.ಪಿ.ಸಿ.ರವರನ್ನು ಅಮಾನತ್ತಿನಲ್ಲಿಡಲಾಗಿರುತ್ತದೆ ಹಾಗೂ ಎ.ಎ.ಓ. (ವಯೋನಿವೃತ್ತಿ), ಶಾಖಾಧೀಕ್ಷಕರು ಮತ್ತು ವಿಷಯ ನಿರ್ವಾಹಕರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಆದೇಶಿಸಿರುತ್ತದೆ. **4. ಕಮಾಂಡೆಂಟ್, 11ನೇ ಪಡೆ ಕೆ.ಎಸ್.ಆರ್.ಪಿ., ಹಾಸನ –** ಘಟಕದಲ್ಲಿನ ಘಟಕಾಧಿಕಾರಿ ಮತ್ತು ಡಿ.ಡಿ.ಓ.ರವರುಗಳ ವಿರುದ್ಧ ಹಾಸನ ನಗರದ ಶಾಂತಿ ಗ್ರಾಮ ಪೊಲೀಸ್ ಠಾಣೆಯಲ್ಲಿ ಅಪರಾಧ ಮೊಕದ್ದಮೆ ದಾಖಲಿಸಿ ಪ್ರಕರಣವನ್ನು ಸಿ.ಐ.ಡಿ. ತನಿಖೆಗೆ ಒಪ್ಪಿಸಲಾಗಿದ್ದು, ಸಿಐಡಿ ತನಿಖಾ ವರದಿಯ ಆಧಾರದ ಮೇಲೆ ಸರ್ಕಾರದ ಆದೇಶ ಸಂಖ್ಯೆ: ಒಇ 26 ಪೊಸಿಪ 2021, ದಿ: 19-11-2021 ರಲ್ಲಿ ಅಭಿಯೋಜನಾ ಮಂಜೂರಾತಿ ನೀಡಿ ಆದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಅಧಿಸೂಚನೆ ಸಂ: ಒಇ 91 ಪಿಇಜಿ 2020, ದಿನಾಂಕ: 28.05.2020 ರನ್ವಯ ಸದರಿ ಅವಧಿಯಲ್ಲಿ ಘಟಕಾಧಿಕಾರಿಗಳಾದ್ದ ಶ್ರೀ ಕೃಷ್ಣಪ್ಪ, ಕಮಾಂಡೆಂಟ್ ರವರನ್ನು ಈ ಪಡೆಯಿಂದ ಕೆ.ಎಸ್.ಆರ್.ಪಿ., ಕೇಂದ್ರ ಕಛೇರಿ, ಬೆಂಗಳೂರು ಘಟಕಕ್ಕೆ ವರ್ಗಾವಣೆ ಮಾಡಲಾಗಿದ್ದು, ಡಿ.ಡಿ.ಓ.ರವರಾಗಿದ್ದ ಶ್ರೀ ಡಿ.ಎನ್.ಚಂದ್ರು, ಸಹಾಯಕ ಆಡಳಿತಾಧಿಕಾರಿ ರವರನ್ನು ಅಮಾನತ್ತುಗೊಳಿಸಲಾಗಿರುತ್ತದೆ. **5. ಸಿ.ಎ.ಆರ್ (ಕೇಂದ್ರ) ಬೆಂಗಳೂರು ನಗರ –** ರೂ.66,000/-ಗಳ ಹಣ ದುರುಪಯೋಗಕ್ಕೆ ಕಾರಣರಾದ ಇಬ್ಬರು ವಿಷಯ ನಿರ್ವಾಹಕರುಗಳನ್ನು ಅಮಾನತ್ತು ಮಾಡಲಾಗಿದೆ. ಸದರಿ ಪ್ರಕರಣದಲ್ಲಿ ಸಿಬ್ಬಂದಿಯವರುಗಳು ದುರುಪಯೋಗಕ್ಕೆ ಕಾರಣರಾಗಿದ್ದು, ಇದರಲ್ಲಿ ಘಟಕಾಧಿಕಾರಿಗಳು ಮತ್ತು ಡಿ.ಡಿ.ಓ ರವರ ಪಾತ್ರವಿಲ್ಲದಿರುವುದರಿಂದ ಇವರುಗಳನ್ನು ಅಮಾನತ್ತುಗೊಳಿಸಿ ಅಥವಾ ವರ್ಗಾವಣೆ ಮಾಡಿರುವುದಿಲ್ಲ. **6. ಹಾವೇರಿ ಜಿಲ್ಲೆ –** ಜಿ.ಪಿ.ಎಫ್ ಹಗರಣದ ಪ್ರಕರಣದಲ್ಲಿ ಸಂಬಂಧಪಟ್ಟರವರ ವಿರುದ್ಧ ಇಲಾಖಾ ಶಿಸ್ತಿನ ಕ್ರಮ ಕೈಕೊಳ್ಳಲಾಗಿದೆ ಹಾಗೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ವಿಷಯ ನಿರ್ವಾಹಕರನ್ನು ಅಮಾನತ್ತಿನಲ್ಲಿಡಲಾಗಿದ್ದು ನಂತರ ಲೀನ್‌ನ್ನು ಡಿಪಿಓ ಬೆಳಗಾವಿಗೆ ಬದಲಾಯಿಸಲಾಗಿರುತ್ತದೆ. ಸಂಬಂಧಿಸಿದ ಶಾಖಾಧೀಕ್ಷಕರು ದಿನಾಂಕ:30-04-2011ರಂದು ನಿವೃತ್ತಿ ಹೊಂದಿರುತ್ತಾರೆ ಹಾಗೂ ಎ.ಎ.ಓ.ರವರನ್ನು ಡಿಪಿಓ, ಶಿವಮೊಗ್ಗಕ್ಕೆ ದಿ:15-07-2010ರಂದು

ವರ್ಗಾವಣೆ ಹೊಂದಿದ್ದು ದಿ:31-05-2015 ರಂದು ನಿವೃತ್ತಿ ಹೊಂದಿ, ದಿ:11-07-2021ರಂದು ಮರಣ ಹೊಂದಿರುತ್ತಾರೆ.

7. ಕಮಾಂಡೆಂಟ್, 1ನೇ ಕೆ.ಎಸ್.ಆರ್.ಪಿ., ಬೆಂಗಳೂರು – ರೂ.36,67,588.00ಗಳ ಹಣ ದುರುಪಯೋಗದ ಪ್ರಕರಣಕ್ಕೆ ಸರ್ಕಾರದ ಆದೇಶ ಸಂಖ್ಯೆ: ಒಇ 39 ಪೊಸಿಅ 2015, ದಿನಾಂಕ: 19.09.2016ರಂತೆ ಮೂವರು ಎ.ಎ.ಓ. (ವಯೋನಿವೃತ್ತಿ) / ಮೂವರು ಶಾಖಾಧೀಕ್ಷಕರು (ವಯೋನಿವೃತ್ತಿ) / ಇಬ್ಬರು ಪ್ರಥಮ ದರ್ಜೆ ಸಹಾಯಕರು (ಒಬ್ಬರು ವಯೋನಿವೃತ್ತಿ) ಹಾಗೂ ಒಬ್ಬ ದ್ವಿದ.ಸ.ರವರುಗಳ ಮೇಲೆ ಜಂಟಿ ಇಲಾಖಾ ವಿಚಾರೆಗೆ ಆದೇಶಿಸಲಾಗಿದ್ದು, ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ.
ಅಲ್ಲದೆ, ಸಂಬಂಧಿಸಿದ ದ್ವಿದ.ಸ.ರವರನ್ನು ದಿನಾಂಕ: 06.11.2014ರಂದು ಅಮಾನತ್ತುಗೊಳಿಸಿದ್ದು, ಅಮಾನತ್ತಿನಲ್ಲೇ ಮುಂದುವರೆದಿರುತ್ತಾರೆ ಹಾಗೂ ಸದರಿಯವರ ಲೀನ್‌ನ್ನು ಐಆರ್‌ಬಿ, ಮುನಿರಾಬಾದ್ ಇಲ್ಲಿಗೆ ಸ್ಥಳಾಂತರಿಸಲಾಗಿದೆ. ಶ್ರೀಮತಿ ಲೈಜಾ ರೋಜಾರಿಯೋ, ಎ.ಎ.ಓ.ರವರನ್ನು ಅಡಿಷನಲ್ ಡಿಜಿಪಿ, ಆಂತರಿಕ ಭದ್ರತಾ ವಿಭಾಗ, ಬೆಂಗಳೂರು ಘಟಕಕ್ಕೆ ವರ್ಗಾವಣೆ ಮಾಡಲಾಗಿರುತ್ತದೆ. ಸದರಿಯವರು ವಯೋನಿವೃತ್ತಿ ಹೊಂದಿರುತ್ತಾರೆ. ಸರ್ಕಾರದ ಪತ್ರ ಸಂಖ್ಯೆ:ಒಇ 39 ಪೊಸಿಲಿ 2015, ದಿನಾಂಕ:27.10.2021ರಲ್ಲಿ ಪ್ರಕರಣದಲ್ಲಿನ ವಿಚಾರಣಾ ವರದಿಯ ಅನುಬಂಧ 1 ರಿಂದ 10 ರಲ್ಲಿನ ದಾಖಲೆಗಳನ್ನು ಪರಿಶೀಲಿಸಿ ಎಷ್ಟು ಮೊತ್ತದ ಚೆಕ್‌ಗಳನ್ನು ನವೀಕರಿಸಿ ಜಮಾ ಮಾಡಲಾಗಿದೆ ಮತ್ತು ನವೀಕರಿಸಲಾಗದ ವ್ಯಪಗತವಾಗಿರುವ ಚೆಕ್‌ಗಳ ಸಂಬಂಧ ಯಾರ ಅವಧಿಯಲ್ಲಿ ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ಖಚಿತವಾಗಿ ನಷ್ಟದ ಮೊತ್ತವನ್ನು ಪ್ರತಿ ಆರೋಪಿತರ ಸಂಬಂಧ ಗುರುತಿಸಿ ವರದಿಯನ್ನು ಕಳುಹಿಸಿಕೊಡಲು ಕೋರಲಾಗಿರುತ್ತದೆ. ಪ್ರಕರಣವು ಚಾಲ್ತಿಯಲ್ಲಿರುತ್ತದೆ.

8. ಈಶಾನ್ಯ ವಲಯ ಕಲಬುರಗಿ – ಜಿ.ಪಿ.ಎಫ್. ಹಣ ದುರುಪಯೋಗ ಪ್ರಕರಣದಲ್ಲಿ ಸಂಬಂಧಪಟ್ಟವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ. ಘನ ನ್ಯಾಯಾಲಯದಿಂದ ಆರೋಪಿತರಿಗೆ ದಂಡ ಹಾಗೂ ಕಾರಾಗೃಹ ವಾಸ ಶಿಕ್ಷೆ ವಿಧಿಸಿದ್ದು, ಇದಕ್ಕೆ ತಡೆಯಾಜ್ಞೆ ನೀಡಿದ್ದು, ವಿಚಾರಣೆಯಲ್ಲಿರುತ್ತದೆ ಹಾಗೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

9. ದಕ್ಷಿಣ ವಿಭಾಗ, ಬೆಂಗಳೂರು ನಗರ – ರೂ.60,000/- + 2,74,748/-ಗಳ ದುರುಪಯೋಗಕ್ಕೆ ಕಾರಣರಾದ ಪ್ರದಸರವರನ್ನು ಅಮಾನತ್ತುಗೊಳಿಸಿ ಇಲಾಖಾ ವಿಚಾರಣೆ ನಡೆಸಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲಾಗಿದೆ.

	10. ಸಂಚಾರ ಪೂರ್ವ ವಿಭಾಗ, ಬೆಂಗಳೂರು ನಗರ – ಸದರಿ ಪ್ರಕರಣಗಳು ಜರುಗಿ ಸುಮಾರು 18 ವರ್ಷ ಮೇಲ್ಪಟ್ಟ ಹಳೆಯ ಪ್ರಕರಣವಾಗಿದ್ದು, ಹಣ ದುರುಪಯೋಗಕ್ಕೆ ಕಾರಣರಾದವರುಗಳು ನಿವೃತ್ತರಾಗಿದ್ದು/ವರ್ಗಾವಣೆಗೊಂಡಿರುವುದು ತಿಳಿದು ಬಂದಿದ್ದು, ಸೇವಾ ಪುಸ್ತಕ ಲಭ್ಯವಿಲ್ಲದೆ ಇರುವುದರಿಂದ ಶಿಸ್ತು ಕ್ರಮ ಜರುಗಿಸುವ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಘಟಕಗಳಿಂದ ಸೇವಾ ಪುಸ್ತಕಗಳನ್ನು ಪಡೆದು ಮಾಹಿತಿ ನೀಡಲು ಕಾಲಾವಕಾಶದ ಅವಶ್ಯಕತೆ ಇರುತ್ತದೆ.
(ಉ) ಕೆಲವೊಂದು ಘಟಕಗಳಲ್ಲಿ ನಗದು ಪುಸ್ತಕವನ್ನು (ಮಡಿಕೇರಿ) ದಿನವಹಿ ದಾಖಲಿಸಿ ನಿರ್ವಹಿಸದೇ ಹಣಕಾಸು ದುರುಪಯೋಗಕ್ಕೆ ಘಟಕಾಧಿಕಾರಿ ಮತ್ತು ಎ.ಎ.ಓ.ರವರು ರಹದಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಗಮನಕ್ಕೆ ಬಂದಿರುವುದಿಲ್ಲ

ಸಂಖ್ಯೆ: ಒಇ 235 ಪಿಇಜಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು